# ಪ್ರಜಾಪ್ರಭುತ್ವ ಹಾಗೂ ಚುನಾವಣೆ

ಪ್ರಜಾತಂತ್ರ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿರುವ ರಾಷ್ಟ್ರಗಳಲ್ಲಿ ಚುನಾವಣೆಗಳಿಗೆ ವಿಶೇಷ ಮಹತ್ವವಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ನಮ್ಮ ಆಶೋತ್ತರಗಳನ್ನು ಸಮಷ್ಟಿಯ ಹಿತವನ್ನಾಗಿ ಪರಿವರ್ತಿಸಿ, ಕಾರ್ಯರೂಪಕ್ಕೆ ತರಬಲ್ಲ ವ್ಯಕ್ತಿಗಳನ್ನು ನಾವೇ ಆಯ್ಕೆ ಮಾಡುವುದಕ್ಕಾಗಿ ಚುನಾವಣೆಗಳು ನಡೆಯುತ್ತವೆ.

ನಿಜವಾದ ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರ ತನ್ನ ಹಾಗೂ ಸಮಷ್ಟಿಯ ಆಶೋತ್ತರಗಳಿಗೆ ಸ್ಪಂದಿಸಬಹುದಾದ ಸಿದ್ಧಾಂತಗಳನ್ನು ಘೋಷಿಸುವ ಪಕ್ಷವನ್ನು ಗಮನಿಸುತ್ತಾನೆ; ಅಂಥ ಪಕ್ಷದ ಪರವಾಗಿ ನಿಂತಿರುವ ಹುರಿಯಾಳು ಎಂಥವನು ಎಂಬುದನ್ನೂ ಪರಿಶೀಲಿಸುತ್ತಾನೆ. ಪಕ್ಷದ ಸಿದ್ಧಾಂತ ಹಾಗೂ ಪಕ್ಷದ ಪರವಾಗಿ ನಿಂತಿರುವ ವ್ಯಕ್ತಿಯ ಚಾರಿತ್ರ್ಯ– ಇವೆರಡನ್ನೂ ಗಣನೆಗೆ ತೆಗೆದುಕೊಂಡೇ ಪ್ರಜ್ಞಾವಂತ ಮತದಾರ ತನ್ನ ಮತ ಚಲಾಯಿಸುತ್ತಾನೆ. ಮತದಾರರೆಲ್ಲರೂ ಈ ನೀತಿಯನ್ನು ಅನುಷ್ಠಾನದಲ್ಲಿ ತಂದಾಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಹಾಗೆ ಚುನಾಯಿತರಾದ ಜನಪ್ರತಿನಿಧಿಗಳು ಸ್ವಾರ್ಥವನ್ನು ದೂರವಿರಿಸಿ, ಪ್ರಜೆಗಳ ನಿರೀಕ್ಷೆಯನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕವಾಗಿ ಶ್ರಮಿಸುತ್ತಾರೆ.

ಆದರೆ ಪ್ರಜಾಪ್ರಭುತ್ವದ ಇತಿಹಾಸವನ್ನು ಗಮನಿಸಿದಾಗ ನೈತಿಕ ಎತ್ತರವನ್ನು ಕಾಪಾಡಿಕೊಂಡು ನಿಜವಾಗಿಯೂ ಜನಸೇವೆ ಮಾಡಬಲ್ಲ ಜನಪ್ರತಿನಿಧಿಗಳು ಬಹು ಸಂಖ್ಯಾತರಲ್ಲ ಎಂಬ ಸತ್ಯ ಕಣ್ಣಿಗೆ ರಾಚುತ್ತದೆ. ಸ್ವತಂತ್ರ ಭಾರತದ ಸಂದರ್ಭದಲ್ಲಂತೂ ನಿಸ್ವಾರ್ಥ ಜನಪ್ರತಿನಿಧಿಗಳ ಸಂಖ್ಯೆ ಚುನಾವಣೆಯಿಂದ ಚುನಾವಣೆಗೆ ಕ್ಷೀಣಿಸುತ್ತಾ ಬಂದು, ಈಗಂತೂ ವಿನಾಶದ ಅಂಚಿನಲ್ಲಿದೆ ಎನ್ನುವಂತಾಗಿದೆ.

ಒಟ್ಟಿನಲ್ಲಿ ಇಂದಿನ ಚುನಾವಣೆಗಳು ಸುಸ್ಥಿರವೂ, ವ್ಯವಸ್ಥಿತವೂ, ಮೌಲ್ಯಾಧಾರಿತವೂ ಆಗಿರುವ ಸರ್ಕಾರಗಳನ್ನು ಹುಟ್ಟು ಹಾಕುವುದರಲ್ಲಿ ಸೋಲುತ್ತಲೇ ಇವೆ. ಚುನಾವಣೆ ಎಂಬುದು ನಮ್ಮ ದೇಶದ ನೈತಿಕ ಅಧಃಪತನದ ದಿಕ್ಸೂಚಿಯಾಗುತ್ತಿದೆ ಎಂದರೆ ಅತ್ಯುಕ್ತಿಯಲ್ಲ. ಚುನಾವಣೆ ಎದುರಾದೊಡನೇ ಪಕ್ಷ ಪಕ್ಷಗಳ ವ್ಯತ್ಯಾಸವಿಲ್ಲದೇ, ಮತದಾರರನ್ನು ಒಲಿಸಿಕೊಳ್ಳುವ ಪ್ರಕ್ರಿಯೆ– ಯಾವುದೇ ಕಾನೂನಿನ ಅಂಕುಶಕ್ಕೆ ಒಳಗಾಗದೇ– ಮುಚ್ಚು ಮರೆಯಿಲ್ಲದೇ ನಡೆಯಲು ಪ್ರಾರಂಭವಾಗುತ್ತದೆ. ಪ್ರತಿಯೊಬ್ಬ ಉಮೇದುವಾರನೂ ಚುನಾವಣಾ ಆಯೋಗ ಗೊತ್ತುಪಡಿಸಿರುವ ಮೊತ್ತದ ಗಡಿಯಾಚೆಗೆ ಎಷ್ಟೋ ದೂರ ಅತಿಕ್ರಮಿಸಿ, ಹಣದ ಹೊಳೆಯನ್ನೇ ಹರಿಸಿ, ಮತದಾರರನ್ನು ಖರೀದಿಸುತ್ತಾನೆ; ಜೊತೆಗೆ ತಾನು ಮತ್ತು ತನ್ನ ಪಕ್ಷ ಅಧಿಕಾರಕ್ಕೆ ಬಂದರೆ ಸ್ವರ್ಗವನ್ನೇ ಭೂಮಿಗೆ ಇಳಿಸುತ್ತೇನೆ ಎಂಬ ಆಶ್ವಾಸನೆಯನ್ನು ನೀಡುತ್ತಾ, ಮತದಾರರಲ್ಲಿ ಬಣ್ಣ ಬಣ್ಣದ ಕನಸುಗಳನ್ನು ಸೃಷ್ಟಿಸುತ್ತಾನೆ. ಚುನಾವಣೆ ಮುಗಿದ ಕ್ಷಣದಲ್ಲಿಯೇ ಇಂಥ ಆಶ್ವಾಸನೆಗಳು ತೆರೆಯ ಮರೆಗೆ ತಳ್ಳಲ್ಪಡುತ್ತವೆ.

'ರಾಜಕೀಯ ಒಂದು ಲೋಲಕ... ಇದರ ತೊನೆತಗಳಿಗೆ ಉರುವಲು ಪೂರೈಕೆಯಾಗುವುದು ಅವಿಚ್ಛಿನ್ನವಾಗಿ ಪುನರುಜ್ಜೀವಿತವಾಗುತ್ತಿರುವ ಭ್ರಮೆಗಳಿಂದಲೇ' ಎಂದು ಐನ್‌ಸ್ಟೀನ್ ಹೇಳಿರುವುದು ಅತ್ಯಂತ ಸಮಂಜಸ ಎನ್ನಿಸುತ್ತದೆಯಲ್ಲವೆ? ಚುನಾವಣೆಯ ಮೊದಲು ತಮ್ಮನ್ನು ಮಹಾನ್ 'ದೇಶಭಕ್ತ'ರೆಂದು ಬಿಂಬಿಸಿಕೊಳ್ಳುತ್ತಿದ್ದ ಜನನಾಯಕರು, ಚುನಾವಣೆಯಲ್ಲಿ ಗೆದ್ದು ಬಂದನಂತರ ಕೊಂಬು ಮೂಡಿ 'ದೇಶಭುಕ್ತ'ರಾಗಿ ಬದಲಾಗುತ್ತಾರೆ!

ನಿಜವಾಗಿ ಪ್ರಜಾಸೇವೆ ಮಾಡಬೇಕೆಂಬ ಹಂಬಲವುಳ್ಳವರು ಶಾಸನ ಸಭೆಗಳಿಗೆ ಪ್ರವೇಶಿಸದೇ ಹೊರಗಿನಿಂದಲೇ ಆ ಕೆಲಸ ಮಾಡಬಹುದೆಂದು ಗಾಂಧೀಜಿ ಮತ್ತೆ ಮತ್ತೆ ಪ್ರತಿಪಾದಿಸುತ್ತಿದ್ದರು. ಇಂದಿನ ದಿನಗಳಲ್ಲಿ ಶಾಸನ ಸಭೆಗಳಲ್ಲಿ– ಬಹಳಷ್ಟು ಸಂದರ್ಭಗಳಲ್ಲಿ– ಪರಸ್ಪರ ನಿಂದೆ, ಘರ್ಷಣೆ, ಧರಣಿ, ದೊಂಬಿ, ಪ್ರತಿಷ್ಠಾ ಪ್ರದರ್ಶನ, ಇತ್ಯಾದಿಗಳೇ ನಡೆಯುತ್ತಿರುವುದನ್ನು ಮಾಧ್ಯಮಗಳು ಬಿತ್ತರಿಸುತ್ತಿವೆ. 'ಪಾರ್ಲಿಮೆಂಟ್ ಎಂಬುದು ಒಂದು ಹರಟೆಯ ಅಂಗಡಿ' ಎನ್ನುತ್ತಾನೆ ಕಾರ್ಲೈಲ್ ಎಂಬ ಚಿಂತಕ. ಈಗ ನಮ್ಮ ಶಾಸನ ಸಭೆಗಳು ಹರಟೆಯ ಅಂಗಡಿಗಳಾಗಿ ಉಳಿದಿಲ್ಲ, ಕುಸ್ತಿಯ ಅಖಾಡಾಗಳೇ ಆಗುತ್ತಿವೆ.

ನಮ್ಮ ದೇಶ ಸ್ವತಂತ್ರವಾದ ಮೇಲೆ 1952 ರಲ್ಲಿ ಮೊದಲ ಮಹಾ ಚುನಾವಣೆ ನಡೆಯಿತು. ಆ ಸಂದರ್ಭದಲ್ಲಿನ ಕೋಲಾಹಲ, ಅನಾಚಾರಗಳನ್ನು ಕಣ್ಣಾರೆ ಕಂಡಿದ್ದ ಡಿ.ವಿ.ಜಿ.ಯವರು 'ಗರ್ದಭ ವಿಜಯ' ಎಂಬ ವಿಡಂಬನ ಪ್ರಹಸನ ಬರೆದರು. ಅದರಲ್ಲಿನ ಒಂದು ಹಾಡಿನ ಕೆಲವು ಸಾಲುಗಳು ನಮ್ಮ ಚುನಾವಣೆಗಳ ಫಲಶ್ರುತಿಯಂತಿವೆ. ಅವು ಹೀಗಿವೆ: 'ಈ ಹೊತ್ತಿನ ಧನಿ ನಾಳೆ ಪರಾರಿ, ನಾಳೆಯ ದನಿ ಈ ಹೊತ್ತು ಭಿಕಾರಿ! ಏನು ಸುಖ, ನಮಗೆಷ್ಟು ಸುಖ! ರಂಪು ರಗಳೆ ಸಂಪಿನ ಮೊಂಡಾಟ, ಗುಂಪು ಕಟ್ಟಿದರೆ ಮಂತ್ರಿಯ ಪೀಠ! ಏನು ಸುಖ, ನಮಗೆಷ್ಟು ಸುಖ!'

■ ವೈನತೇಯ

## ಮಾತೇ ಮುತ್ತು

★ ವೈದಿಕದ 'ಅಹಂ'ಕಾರವು ವೈದಿಕ'ಶಾಹಿ'ಯಾಗಿ ಭಾರತದಲ್ಲಿ ತಾನು ಮಾತ್ರವೇ ವ್ಯವಸ್ಥೆ, ತಾನು ಮಾತ್ರವೇ ಆಳ್ವಿಕೆ ಎಂಬ 'ಶಾಹೀ' ಕುಬುದ್ಧಿ ಕುತಂತ್ರವನ್ನು ಬಿಟ್ಟು 'ವೈದಿಕ'ವಾಗಿ ತನ್ನಷ್ಟಕ್ಕೆ ತಾನೇ ಇದ್ದರೆ ಅದಕ್ಕೆ ಕ್ಷೇಮ.

-ದೇವನೂರು ಮಹಾದೇವ

★ ಘಟವನೊಡೆದು ದಿಟವನರಿಯಲೇಕೆ, ಈ ಘಟವೇ ದಿಟವೆಂದರಿತರೆ ಸಾಲದೆ?

-ದೇವರ ದಾಸಿಮಯ್ಯ

★ ಓದುವುದನ್ನು ಎಲ್ಲರೂ ಬಲ್ಲರು. ಆದರೆ ಏನನ್ನು ಓದಬೇಕು ಎಂಬುದನ್ನು ಕೆಲವರು ಮಾತ್ರ ಬಲ್ಲರು.

-ಬರ್ನಾರ್ಡ್‌ಶಾ

★ ನಿನ್ನ ಮಾರ್ಗದಲ್ಲಿ ಗುಲಾಬಿ ಹರಡಿರಲಿ ಅಥವಾ ಮುಳ್ಳುಗಳೇ ಇರಲಿ. ನೀನು ಮಾತ್ರ ನಿಲ್ಲದೆ ಮುಂದೆ ನಡೆ. ಏಕೆಂದರೆ ಮೀನು ನಿನಗಾಗಿ ದಡದಲ್ಲಿ ಕುಳಿತು ಕಾಯುವುದಿಲ್ಲ, ಗಾಳ ಹಿಡಿದು ನಡೆಯಲೇಬೇಕು.

-ಸ್ಟೇಂಟನ್

★ ಧರ್ಮದ ಇರುವಿಕೆಯಲ್ಲೇ ಮನುಷ್ಯ ಇಷ್ಟೊಂದು ದುಷ್ಟನಾಗಿರುವಾಗ, ಧರ್ಮವೇ ಇಲ್ಲದಿದ್ದರೆ ಅವನು ಏನಾಗಬಹುದಿತ್ತು?

-ಬೆಂಜಮಿನ್ ಫ್ರಾಂಕ್ಲಿನ್

★ ನಂಬಿಕೆಯೇ ಜೀವನ, ಸಂದೇಹವೇ ಮೃತ್ಯು.

-ರಾಮಕೃಷ್ಣ ಪರಮಹಂಸ

* ಸುಲಭ ಬೆಲೆಯಲ್ಲಿ ಖರೀದಿಸಿ, ಅಧಿಕ ಬೆಲೆಗೆ ಮಾರಾಟ ಮಾಡುವುದು– ಮನುಷ್ಯನಿಗೆ ದೊಡ್ಡ ಕಳಂಕವಲ್ಲದೆ ಮತ್ತೇನು?

-ಮಹಾತ್ಮ ಗಾಂಧೀಜಿ

* ಶತ್ರುಗಳ ಮಧ್ಯೆ ಅಜಾತಶತ್ರುವಾಗಿ ಜೀವನ ನಡೆಸುವುದರಲ್ಲಿ ಸುಖವಿದೆ.

-ಗೌತಮ ಬುದ್ಧ

* ಆಸೆ ಇಲ್ಲದವನನ್ನು ಚಿಂತೆ ಬಾಧಿಸುವುದಿಲ್ಲ, ಮನಸ್ಸು ನಿಶ್ಚಿಂತೆಯಿಂದ ಇರುತ್ತದೆ.

-ಕಬೀರ

★ 'ನಷ್ಟ', 'ಮರಣ' ಮತ್ತು 'ಮಿಂಚಿ ಹೋದದ್ದಕ್ಕೆ' ಬುದ್ಧಿವಂತರು ಚಿಂತಿಸುವುದಿಲ್ಲ. ಬುದ್ಧಿವಂತರಿಗೆ ಮತ್ತು ಮೂರ್ಖರಿಗೆ ಇರುವ ವ್ಯತ್ಯಾಸ ಇದೇ ಆಗಿದೆ.

-ಪಂಚತಂತ್ರ

* ವಿದ್ಯೆಕ್ಕೆ ಸಮನಾದ ಇನ್ನೊಂದು ಕಣ್ಣು ಇಲ್ಲ. ಸತ್ಯಕ್ಕೆ ಸಮನಾದ ತಪಸ್ಸಿಲ್ಲ. ಆಸಕ್ತಿಗೆ ಸಮನಾದ ದುಃಖವಿಲ್ಲ. ತ್ಯಾಗಕ್ಕೆ ಸಮನಾದ ಸುಖವಿಲ್ಲ.

-ಮಹಾಭಾರತ

★ ದೀನನಲ್ಲದವನು ಪ್ರಿಯವನ್ನು ಮಾತನಾಡಬೇಕು; ಶೂರನಾದವನು ಬಡಾಯಿ ಕೊಚ್ಚಿಕೊಳ್ಳಬಾರದು; ದಾನಿ ಅಯೋಗ್ಯರಿಗೆ ದಾನ ಮಾಡಬಾರದು; ಪಂಡಿತನಾದವನು ನಿಷ್ಠುರವಾಗಿರಬಾರದು.

-ಹಿತೋಪದೇಶ

★ ಕೊಂಡೊಯ್ದು ಬಡಿಯುವವರ ಕೊಂಡಾಡುತ್ತಾ ಇರಬೇಕು, ಕಂಡು ಸಹಿಸದವರ ಕರೆಯಬೇಕು.

-ಪುರಂದರದಾಸ